# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 307 | Pages. 2 | Date: 31-10-2025, FRIDAY RNI NO: KARKAN/2024/89601 Kannada Daily

ಸಂಪುಟ : 01 - ಸಂಚಿಕೆ : 307 - ಪುಟಗಳು : 2 31-10-2025 ಶುಕ್ರವಾರ Ph: 8762954248 ದರ : ₹1


# ಜಿಲ್ಲೆಯ ಸಾಧಕರಿಗೆ ಒಲಿದ ರಾಜ್ಯೋತ್ಸವ ಪ್ರಶಸ್ತಿ

## ಕೃಷಿ ಕ್ಷೇತ್ರದಿಂದ ರಂಗಸ್ವಾಮಿ, ಕಲಾವಿದ ಗುಂಡುರಾಜ್ ಆಯ್ಕೆ | ನಾಳೆ ಪ್ರಶಸ್ತಿ ಪ್ರದಾನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: 2025ನೇ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಸಾಧಕರ ಪಟ್ಟಿಯನ್ನು ಸರ್ಕಾರ ಗುರುವಾರ ಪ್ರಕಟಿಸಿದ್ದು ಜಿಲ್ಲೆಯ ಇಬ್ಬರು ಭಾಜನರಾಗಿದ್ದಾರೆ.

ಕೃಷಿ ಕ್ಷೇತ್ರದಿಂದ ಎಂ.ಸಿ.ರಂಗಸ್ವಾಮಿ ಹಾಗೂ ಬಯಲಾಟ ಕ್ಷೇತ್ರದಿಂದ ತೊದಲುಗೊಂಬೆ ಕಲಾವಿದ ಗುಂಡುರಾಜ್ ಅವರನ್ನು ಪರಿಗಣಿಸಲಾಗಿದೆ. ನ. 1ರಂದು ಬೆಂಗಳೂರಿನಲ್ಲಿ ನಡೆಯುವ ಕನ್ನಡ ರಾಜ್ಯೋತ್ಸವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸರ್ಕಾರದ ಕಾರ್ಯದರ್ಶಿ ಡಾ.ಎಂ.ವಿ.ವೆಂಕಟೇಶ್ ತಿಳಿಸಿದ್ದಾರೆ.

### ಸಾವಿರ ಹಸುಗಳ ಸಾಕಣೆ

ಅರಕಲಗೂಡು ತಾಲ್ಲೂಕು ದೊಡ್ಡಮಗ್ಗೆ ಗ್ರಾಮದ ಎಂ.ಸಿ.ರಂಗಸ್ವಾಮಿ ಕೃಷಿ ಕ್ಷೇತ್ರದಲ್ಲಿ ಅಪರಿಮಿತ ಸಾಧನೆ ಮೆರೆದಿದ್ದಾರೆ. ಕೃಷಿ, ಹೈನುಗಾರಿಕೆ, ಆಧುನಿಕ ಕೃಷಿ ಪದ್ಧತಿಯಲ್ಲಿ ರಂಗಸ್ವಾಮಿ ಅವರ ಕಾರ್ಯ ಅಪಾರ. ದಿ. ಎಂ.ಜೆ.ತಿಮ್ಮೇಗೌಡ-ಲಕ್ಷ್ಮಮ್ಮ ಅವರ ಹಿರಿಯ ಪುತ್ರ



ಎಂ.ಸಿ.ರಂಗಸ್ವಾಮಿ 1955ರ ಜನವರಿ 1 ರಂದು ಜನಿಸಿದರು. ಬಿಎಸ್‌ಸಿ ಅಗ್ರಿಕಲ್ಚರ್ ಶಿಕ್ಷಣ ಪಡೆದಿರುವ ರಂಗಸ್ವಾಮಿ ನೂರಾರು ಎಕರೆ ಭೂಮಿಯಲ್ಲಿ ಶ್ರೀಗಂಧ, ತೆಂಗು, ಅಡಿಕೆ, ಕಾಳು ಮೆಣಸು, ಏಲಕ್ಕಿ, ಕಾಫಿ ಹಾಗು ಮಿಶ್ರ ಬೆಸಾಯ ಪದ್ಧತಿ ಮಾಡಿಕೊಂಡಿದ್ದಾರೆ. ಇಸ್ರೇಲ್ ಮಾದರಿಯ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ಅವರು ಒಂದು ಸಾವಿರ ಹಸುಗಳನ್ನು ಸಾಕಣೆ ಮಾಡಿದ್ದಾರೆ. ಮೀನು, ಕೋಳಿ ಸಾಕಾಣಿಕೆ ಸೇರಿ ಮಿಶ್ರ ಬೇಸಾಯದಲ್ಲಿ ಯಶಸ್ವಿಯಾಗಿದ್ದಾರೆ. ಸ್ಥಳೀಯವಾಗಿ ಉದ್ಯೋಗವನ್ನು ಸೃಷ್ಟಿಸುವ ಮೂಲಕ, ಹಾಲಿನ ಉತ್ಪನ್ನಗಳಾದ ಮಿಲ್ಕಿಂಗ್ ಅಂಡ್ ಆಲ್ ಅಬೌಟ್ ಎಂಬ ಎರಡು ಬ್ರಾಂಡ್‌ಗಳನ್ನು ಪರಿಚಯಿಸುತ್ತಾರೆ.

### ಬಂಗಾರದ ಮನುಷ್ಯ ಪ್ರೇರಣೆ

ರಂಗಸ್ವಾಮಿ ಅವರು ಪ್ರಗತಿಪರ ಕೃಷಿಕನಾಗಲು ಡಾ. ರಾಜಕುಮಾರ್ ಅಭಿನಯದ ಬಂಗಾರದ ಮನುಷ್ಯ ಚಲನಚಿತ್ರ ಪ್ರೇರಣೆ. ಸಿನಿಮಾ ನೋಡಿದ ರಂಗಸ್ವಾಮಿ ರಾಜಕುಮಾರ್ ಅವರಂತೆ ಕೃಷಿ ಸಾಧಕನಾಗಬೇಕೆಂದು ಪಣ ತೊಟ್ಟಿದ್ದರು. ಅದಕ್ಕೆ ಕುಟುಂಬದ ಸಹಕಾರವು ಅಧಿಕವಾಗಿತ್ತು. ಅಂದುಕೊಂಡಂತೆ ಕೃಷಿಯಲ್ಲಿ ಅತ್ಯದ್ಭುತ ಸಾಧನೆಗಳನ್ನು ರಂಗಸ್ವಾಮಿ ಮಾಡಿದ್ದಾರೆಂದರೆ ಅತಿಶಯೋಕ್ತಿಯಲ್ಲ. ರಂಗಸ್ವಾಮಿ ಅವರಿಗೆ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ. ಜೊತೆಗೆ ವಿವಿಧ ಸಂಘ ಸಂಸ್ಥೆಗಳಿಂದಲೂ ಪ್ರಶಸ್ತಿಗೆ ಭಾಜನರಾಗಿದ್ದಾರೆ.



### ಕಲಾವಿದನಿಗೆ ಒಲಿದ ಪ್ರಶಸ್ತಿ

ಬಯಲಾಟ ಕ್ಷೇತ್ರದಿಂದ ತೊದಲುಗೊಂಬೆ ಕಲಾವಿದ ಹಾಸನ ತಾಲ್ಲೂಕಿನ ಹೂವಿನಹಳ್ಳಿ ಕಾವಲು ಗ್ರಾಮದ ಗುಂಡುರಾಜ್ ಅವರನ್ನು 2025ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

1959ರಲ್ಲಿ ರಾಮಯ್ಯ ಮತ್ತು ಹನುಮಮ್ಮ ಅವರ ಪುತ್ರರಾಗಿ ಗುಂಡುರಾಜ್ ಜನಿಸಿದರು. ಶಿಳ್ಳೆಕ್ಯಾತ ಸಮುದಾಯಕ್ಕೆ ಸೇರಿದ ಇವರ ಪೂರ್ವಜರು ಸಹ ಹಳ್ಳಿಯಿಂದ ದಿಲ್ಲಿವರೆಗೆ ತೊದಲುಗೊಂಬೆ ಪ್ರದರ್ಶಿಸುತ್ತಾ ಬಂದಿದ್ದಾರೆ. ಕುಟುಂಬದ ಹಿರಿಯರಿಂದ ಬಳುವಳಿಯಾಗಿ ಬಂದ ಕಲೆಯನ್ನು ಗುಂಡುರಾಜ್ ಅವರು ಅಳವಡಿಸಿಕೊಂಡು ದೇಶ ವಿದೇಶಗಳಲ್ಲಿ ಹಲವು ಪ್ರದರ್ಶನ ನೀಡಿದ್ದಾರೆ. 67 ವರ್ಷದ ಅವರು ಇಂದಿಗೂ ಕಲಾ ಸೇವೆ ಮುಂದುವರಿಸಿದ್ದಾರೆ. ಕಳೆದ 60 ವರ್ಷಗಳಿಂದ ರಾಮಾಯಣ, ಮಹಾಭಾರತ, ಪೌರಾಣಿಕ, ಐತಿಹಾಸಿಕ ಪ್ರಸಂಗಗಳನ್ನು ಗೊಂಬೆಯಾಟದ ಮೂಲಕ ಪ್ರದರ್ಶಿಸುತ್ತಾ ಜನಜಾಗೃತಿ ಮೂಡಿಸುತ್ತಿದ್ದಾರೆ.


ಅಮೆರಿಕ, ಕುವೈತ್, ಕೊರಿಯಾ, ದಕ್ಷಿಣ ಆಫ್ರಿಕಾ, ಜಿಂಬಾಬ್ವೆ, ಫ್ರಾನ್ಸ್, ಪೋಲೆಂಡ್ ಮುಂತಾದ ದೇಶಗಳಲ್ಲಿ ಕಾರ್ಯಕ್ರಮ ನೀಡಿ ಮೆಚ್ಚುಗೆ ಗಳಿಸಿದ್ದಾರೆ. ಕೊರಿಯಾದಲ್ಲಿ ನಡೆದ 3ನೇ ಡೆಲಿಫಿಕ್ಸ್ ಗೇಮ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿ ಮಾರ್ನಿಂಗ್ ಮೆಡಲ್ ಪ್ರಶಸ್ತಿಯೊಂದಿಗೆ ಬೆಳ್ಳಿ ಪದಕ ಗಳಿಸಿದ್ದಾರೆ. ಕುವೈತ್‌ನ ಕನ್ನಡ ಕಲಾಕೂಟದ ಗೌರವಕ್ಕೂ ಭಾಜನರಾಗಿದ್ದಾರೆ.

ಈ ಕುರಿತು ಗುಂಡುರಾಜ್ ಪ್ರತಿಕ್ರಿಯಿಸಿ, ಪ್ರಶಸ್ತಿಗಾಗಿ ಆಸೆಪಟ್ಟು ಕಲಾ ಸೇವೆ ಮಾಡಿಲ್ಲ. ಪ್ರಶಸ್ತಿಗೆ ಶಿಫಾರಸ್ಸು, ಅರ್ಜಿ, ರಾಜಕೀಯ ನಡೆಯದಿದ್ದರೆ ನನ್ನಂತಹ ಕಲಾವಿದನಿಗೆ ಅವಕಾಶಗಳು ಸಿಗುತ್ತವೆ ಎಂಬುದಕ್ಕೆ 70ನೇ ಕನ್ನಡ ರಾಜ್ಯೋತ್ಸವ ಸಾಕ್ಷಿ. ಪ್ರಶಸ್ತಿಯೇ ನನ್ನ ಕಲೆಯನ್ನು ಅರಸಿ ಬಂದಿದ್ದಕ್ಕೆ ಖುಷಿ ಇದೆ ಎಂದರು.

## ನಿರಂತರ ಅಧ್ಯಯನ ಯಶಸ್ಸಿನತ್ತ ಕರೆದೊಯ್ಯುತ್ತೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವಿದ್ಯಾರ್ಥಿಗಳ ನಿರಂತರ ಓದುವ ಅಭ್ಯಾಸದಿಂದ ಉತ್ತಮ ಜ್ಞಾನ ಸಂಪಾದಿಸುವ ನಿಟ್ಟನಲ್ಲಿ ಯಶಸ್ಸು ನಮ್ಮದಾಗುತ್ತದೆ ಎಂದು ಅಕ್ಷರ ಅಕಾಡೆಮಿ ವ್ಯವಸ್ಥಾಪಕ ಡಿ.ಪಿ. ಕಾರ್ತಿಕ್ ಹೇಳಿದರು. ನಗರದ ಆರ್.ಸಿ. ರಸ್ತೆ ಗಂಧದಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಿರ್ವಹಣಾಶಾಸ್ತ್ರ ವಿಭಾಗದ ವತಿಯಿಂದ ಗುರುವಾರ ಪ್ರಥಮ ವರ್ಷದ ಬಿ.ಬಿ.ಎ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಸ್ವಾಗತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಮ್ಮ ಜ್ಞಾನಾಭಿವೃದ್ಧಿಗೆ ಬೇಕಾದ ಸಿದ್ದತೆ ಮಾಡುವುದು ಅಗತ್ಯ. ಶಿಕ್ಷಣ ಪ್ರತಿಯೊಬ್ಬ ವ್ಯಕ್ತಿಯ ಅತ್ಯಮೂಲ್ಯ ಸಂಪಾದನೆ ಎಂದರೆ ತಪ್ಪಾಗಲಾರದು.




ಯಾವುದೇ ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಪರಿಣಿತಿ ಹೊಂದಿದಾಗ ಮಾತ್ರ ಯಶಸ್ಸು ನಮ್ಮ ಕೈಸೇರುತ್ತದೆ. ಈ ನಿಟ್ಟನಲ್ಲಿ ವಿದ್ಯಾರ್ಥಿಗಳು ದಿನನಿತ್ಯ ಸ್ಪರ್ಧಾತ್ಮಕ ಪರೀಕ್ಷೆಗಾಗಿ ಹೆಚ್ಚಿನ ಸಮಯವನ್ನು ಮೀಸಲಿಡಬೇಕು. ಜೊತೆಗೆ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಬರುವ ಮಾದರಿಯುತ ಪ್ರಶ್ನೆಗಳ ಬಗ್ಗೆ ತಿಳಿಸಿಕೊಟ್ಟರು. ಇಂದಿನ ಯುವ ಜನತೆ ವಿದ್ಯಾಭ್ಯಾಸದಲ್ಲಿ ಹಿಂದುಳಿಯಲು ಸಾಮಾಜಿಕ ಮಾಧ್ಯಮಗಳು ಮುಖ್ಯ ಕಾರಣವಾಗಿವೆ. ಮೊಬೈಲ್‌ನಲ್ಲಿ ಕಳೆಯುವ ಸಮಯವನ್ನು ತಮ್ಮ ಓದಿಗೆ ಮೀಸಲಿಟ್ಟಾಗ ಮಾತ್ರ ಸಾಧನೆಯ ಮೆಟ್ಟಿಲೇರಲು ಸಾಧ್ಯವಾಗುತ್ತದೆ. ಯುವಕರು ವಿದ್ಯಾಭ್ಯಾಸದಲ್ಲಿ ಇಂದು ಕುಂಠಿತರಾಗಲು ಸಾಮಾಜಿಕ ಮಾಧ್ಯಮಗಳು ಕಾರಣವಾಗಿದೆ. ಸಾಧನೆಯ ಹಾದಿಯಲ್ಲಿ ಜಯ ಸಾಧಿಸಬೇಕಾದರೆ ಏಕಾಗ್ರತೆಯಿಂದ ಶಿಸ್ತು ಮೈಗೂಡಿಸಿಕೊಂಡು ಸಾಗಬೇಕು ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಮಾತನಾಡಿ, ವಿದ್ಯಾರ್ಥಿಗಳಿಗೆ ಪಠ್ಯದ ಶಿಕ್ಷಣದ ಜೊತೆಗೆ ಶಿಸ್ತು, ಸಮಯ ಪಾಲನೆ ಮುಖ್ಯ. ಶಿಕ್ಷಣದಿಂದ ಸಮಾಜದ ಬದಲಾವಣೆ ಸಾಧ್ಯ. ವಿದ್ಯಾರ್ಥಿನಿಯರು ಕಲಿಕೆಯೆಡೆಗೆ ಹೆಚ್ಚಿನ ಗಮನ ಹರಿಸಬೇಕು. ಗುರು-ಹಿರಿಯರ ಮಾರ್ಗದರ್ಶನವನ್ನು ಅಳವಡಿಸಿಕೊಂಡಾಗ ಮಾತ್ರ ಜೀವನದಲ್ಲಿ ಉನ್ನತ ಮಟ್ಟಕ್ಕೆ ತಲುಪಬಹುದು. ವಿದ್ಯಾರ್ಥಿ ಜೀವನದ ಪ್ರಾಮಾಣಿಕ ಕಲಿಕೆ ಭವಿಷ್ಯದ ಯಶಸ್ಸಿನ ಕ್ಷಣಗಳಿಗೆ ಕಾರಣವಾಗುವುದು. ಯುವತಿಯರು ವಿದ್ಯಾಭ್ಯಾಸದ ಅವಧಿಯಲ್ಲಿ ಯಾವುದೇ ಅಡ್ಡದಾರಿಯನ್ನು ಹಿಡಿಯದರೆ ಉತ್ತಮ ಗುಣಗಳನ್ನು ಮೈಗೂಡಿಸಿಕೊಂಡು ತಮ್ಮ ಜೀವನವನ್ನು ಕಟ್ಟಿಕೊಳ್ಳಬೇಕು ಎಂದು ಹೇಳಿದರು. ಐ.ಕ್ಯೂ.ಎ.ಸಿ. ಸಂಚಾಲಕ ಜೆ.ಆರ್. ಮೋಹನ್ ಕುಮಾರ್, ನಿರ್ವಹಣಾಶಾಸ್ತ್ರ ವಿಭಾಗದ ಮುಖ್ಯಸ್ಥೆ ಎಸ್.ಜಿ. ರೇಖಾ, ಉಪನ್ಯಾಸಕರಾದ ನವೀನ್ ಕೆ.ಸಿ., ಬಿಂದು, ಅತಿಥ್, ಸ್ವಪ್ನ ಹಾಗೂ ಇತರರು ಹಾಜರಿದ್ದರು.

## ಪ್ರಾಚೀನ ಕಲೆ ಉಳಿವಿಗೆ ಯುವ ಸಮೂಹ ಗಮನ ಹರಿಸಲಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಮ್ಮ ನಾಡು ನುಡಿ ಸಂಸ್ಕೃತಿ ಆಚಾರ, ವಿಚಾರ, ಜಾನಪದ, ಸಂಪ್ರದಾಯಗಳನ್ನು ಬಿಂಬಿಸುವ ಕಲೆಗಳನ್ನು ಜೀವಂತವಾಗಿ ಉಳಿಸಲು ಯುವ ಸಮೂಹವನ್ನು ಸದೃಢಗೊಳಿಸುವುದು ಅಗತ್ಯವಿದೆ ಎಂದು ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಅರುಣ ಮಾಚಯ್ಯ ತಿಳಿಸಿದ್ದಾರೆ. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೇರಾ ಯುವ ಭಾರತ್ ಸಹಯೋಗದಲ್ಲಿ ಗುರುವಾರ ಹಾಸನಾಂಬ ಕಲಾಕ್ಷೇತ್ರದಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಯುವಜನೋತ್ಸವ ಉದ್ಘಾಟಿಸಿ ಮಾತನಾಡಿ, ಬಹುದೊಡ್ಡ ಮಾನವ ಸಂಪನ್ಮೂಲ ಹೊಂದಿರುವ ದೇಶದಲ್ಲಿ ಶೇ.62 ರಷ್ಟು 40 ವರ್ಷದೊಳಗಿನ ಯುವ ಜನತೆ ಹೊಂದಿರುವುದು ಹೆಮ್ಮೆಯ ವಿಷಯ ಎಂದು ತಿಳಿಸಿದರು.




ನಮ್ಮ ದೇಶ ಪ್ರಪಂಚದ ನಾನಾ ರಾಷ್ಟ್ರಗಳಿಗೆ ಮಾನವ ಸಂಪನ್ಮೂಲ ರಫ್ತು ಮಾಡುವ ಸ್ಥಿತಿಯಲ್ಲಿರುವುದು ಸಂತೋಷ ತರುತ್ತದೆ. ಭಾರತೀಯರು ಎಲ್ಲಾ ರಂಗಗಳಲ್ಲೂ ತಮ್ಮ ಛಾಪು ಮೂಡಿಸಿದ್ದಾರೆ. ಯುವ ಜನತೆ ತಮ್ಮಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಿ ಪ್ರಜ್ವಲಿಸಿ ಎಂದು ಶುಭ ಹಾರೈಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಎಲ್.ಮಲ್ಲೇಶ್ ಗೌಡ ಮಾತನಾಡಿ, ಯುವ ಜನತೆಯ ಮೂಲಕ ದೇಶವನ್ನು ಎತ್ತರದ ಸ್ಥಾನದಲ್ಲಿ ಕಲ್ಪಿಸಿಕೊಳ್ಳುತ್ತದ್ದೇವೆ. ಈ ನಿಟ್ಟನಲ್ಲಿ ಯುವ ಜನತೆ ಪ್ರಾಮಾಣಿಕ ಪ್ರಯತ್ನ ಮಾಡಿದರೆ ವಿಶ್ವ ಆಳಾಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಯುವ ಜನತೆ ತಮ್ಮಲ್ಲಿರುವ ಪ್ರತಿಭೆಯನ್ನು ಸಕಾರಾತ್ಮಕ ವಾಗಿ ನಿರ್ದಿಷ್ಟ ಮಾರ್ಗದಲ್ಲಿ ವಿನಿಯೋಗಿಸಿದರೆ ವಿಶ್ವ ಮಟ್ಟದಲ್ಲಿ ಬೆಳಗಬಹುವುದು. ಯುವ ಜನತೆ ಅಮೂಲ್ಯವಾದ ಸಮಯವನ್ನು ಅನಗತ್ಯವಾಗಿ ಟಿವಿ ವೀಕ್ಷಣೆ, ಸಾಮಾಜಿಕ ಜಾಲತಾಣಗಳಲ್ಲಿ ಕಳೆಯುತ್ತಾ ತಮ್ಮಲ್ಲಿರುವ ಪ್ರತಿಭೆ ವ್ಯರ್ಥವಾಗುತ್ತಿದೆ. ಭವಿಷ್ಯದ ಭಾರತದ ಬಗ್ಗೆ ಆತಂಕ ಕಾಡುತ್ತಿದೆ ಎಂದರು.

ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಸಂಘದ ಅಧ್ಯಕ್ಷ ಬಿ.ಪಿ.ಕೃಷ್ಣೇಗೌಡ ಮಾತನಾಡಿ, ಯುವ ಜನತೆ ಜಾನಪದ ಕಲೆ, ಸಂಸ್ಕೃತಿ ಉಳಿಸುವ ನಿಟ್ಟನಲ್ಲಿ ಸಾಗಿ ಎಂದು ಶುಭ ಹಾರೈಸಿದರು.

ಜಿಲ್ಲಾ ನೌಕರರ ಸಂಘದ ಕಾರ್ಯದರ್ಶಿ ಲಕ್ಷ್ಮಿಕಾಂತ್, ರಾಷ್ಟ್ರ ಪ್ರಶಸ್ತಿ ವಿಜೇತ ಬಿ.ಟಿ. ಮಾನವ, ಹಿರಿಯ ಕಲಾವಿದರಾದ ಗ್ಯಾರಂಟಿ ರಾಮಣ್ಣ, ಶೇಖರಪ್ಪ, ಕಟ್ಟಾಯ ಶಿವಕುಮಾರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಚಂದ್ರಶೇಖರ್ ಉಪಸ್ಥಿತರಿದ್ದರು.

## ಹಾಸನ ಜಿಲ್ಲಾಧಿಕಾರಿ ವಿರುದ್ಧ ಮುಂದುವರಿದ ವಕೀಲರ ಪ್ರತಿಭಟನೆ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಪ್ರತಿಭಟನಾಕಾರರ ಮನವಿ ಸ್ವೀಕರಿಸಲು ಬಾರದೆ ಉದ್ದಟತನ ಪ್ರದರ್ಶಿಸಿರುವ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಬಹಿರಂಗ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿ ಗುರುವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾ ನ್ಯಾಯಾಲಯದ ಆವರಣದಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ಎನ್‌ಆರ್ ವೃತ್ತದಲ್ಲಿ ರಸ್ತೆ ತಡೆ ನಡೆಸಿದರು. ಜಿಲ್ಲಾಧಿಕಾರಿ ಕಚೇರಿ ಬಳಿಗೆ ತೆರಳಿ ಜಿಲ್ಲಾಧಿಕಾರಿ ವಿರುದ್ಧ ಸರ್ಕಾರ ಮುಖ್ಯ ಕಾರ್ಯದರ್ಶಿಗೆ ಮನವಿ ಸಲ್ಲಿಸಿದರು.

ಬುಧವಾರ ಜಿಲ್ಲಾ ವಕೀಲರ ಸಂಘದಿಂದ ಮೈಸೂರು ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಅವರು ಸುಪ್ರೀಂ ಹಾಗೂ ಹೈಕೋರ್ಟ್ ಮುಖ್ಯ ನ್ಯಾಯಾಧೀಶರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವುದನ್ನು ಖಂಡಿಸಿ ಪ್ರತಿಭಟನೆ ನಡೆಸಿದ ವೇಳೆ ಮನವಿ ಸ್ವೀಕರಿಸಲು ಜಿಲ್ಲಾಧಿಕಾರಿ ಆಗಮಿಸದಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿ, ರಸ್ತೆ ತಡೆ ನಡೆಸಿ ಪ್ರತಿಭಟಿಸಿದ್ದರು.

ಅದರ ಮುಂದುವರೆ ಭಾಗವಾಗಿ ಗುರುವಾರ ಸಹ ಪ್ರತಿಭಟನೆ ಮುಂದುವರಿಸಿದ ವಕೀಲರು, ಜಿಲ್ಲಾಧಿಕಾರಿ ಕೂಡಲೇ ಕ್ಷಮೆ ಕೇಳಬೇಕು. ಇಲ್ಲವೇ ಜಿಲ್ಲೆಯನ್ನು ಬಿಟ್ಟು ಹೊರಡಬೇಕು, ದುರಹಂಕಾರ ವರ್ತನೆ ತೋರಿದ ಜಿಲ್ಲಾಧಿಕಾರಿಯನ್ನು ವರ್ಗಾವಣೆ ಮಾಡಬೇಕೆಂದು ಒತ್ತಾಯಿಸಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಮೊಗಣ್ಣಗೌಡ, ಸಂಘದ ಪ್ರಧಾನ ಕಾರ್ಯದರ್ಶಿ ಹೊಂಬೇಶ್, ಜಿಲ್ಲಾ ವಕೀಲರ ಸಂಘದ ಖಜಾಂಚಿ ಜಿ.ಎನ್.ಸುಗುಣ ಉಪಾಧ್ಯಕ್ಷ ಎಂ.ಟಿ.ತಿಮ್ಮೇಗೌಡ, ಜಂಟಿ ಕಾರ್ಯದರ್ಶಿ ರಘು, ವಕೀಲರಾದ, ದೇವರಾಜೇಗೌಡ, ನವಿಲೆ ಅಣ್ಣಪ್ಪ, ಪೂರ್ಣಚಂದ್ರ, ತಮ್ಮಣ್ಣಗೌಡ, ಚನ್ನಂಗಿಹಳ್ಳಿ ಶ್ರೀಕಾಂತ್ ಇದ್ದರು.

## ಪುನೀತ್ ರಾಜಕುಮಾರ್ ಎಂದಿಗೂ ಸ್ಮರಣೀಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಯಾವ ಕೆಲಸ ಮಾಡಿದರೂ ಅದನ್ನು ಹೇಳಿಕೊಳ್ಳದವರು, ಮಾಡಿದ ದಾನ ಎಡಗೈ ಕೊಟ್ಟಾಗ ಬಲಗೈಗೂ ಗೊತ್ತಾಗಬಾರದು ಎನ್ನುವ ಗಾದೆಗೆ ನಿಜವಾದ ಅರ್ಥ ನೀಡಿದವರು ನಟ ಪುನೀತ್ ರಾಜಕುಮಾರ್. ಅವರು ಎಂದಿಗೂ ಅಜರಾಮರ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಕುಶಾಲನಗರ ಗೆಳೆಯರ ಬಳಗದ ವತಿಯಿಂದ ಕೌಡಹಳ್ಳಿ ವಿಶೇಷ ಚೇತನ ಮಕ್ಕಳ ಶಾಲೆಯಲ್ಲಿ ಡಾ. ಪುನೀತ್ ರಾಜಕುಮಾರ್ ಅವರ ನಾಲ್ಕನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅಪ್ಪು ಅವರ ಭಾವಚಿತ್ರಕ್ಕೆ ದೀಪ ಬೆಳಗಿಸಿದ ಮಾತನಾಡಿ, ಪುನೀತ್ ರಾಜಕುಮಾರ್ ಅವರ ಮರಣದ ನಂತರ ಜನರು ಅವರ ಪುಣ್ಯಕರ್ಮಗಳನ್ನು ಅರಿತುಕೊಂಡರು. ಅವರು ನಟನೆಯಲ್ಲಿ ಮಾತ್ರವಲ್ಲ, ನಿಜ ಜೀವನದಲ್ಲಿಯೂ ಮಾದರಿಯಾಗಿದ್ದರು. ಅವರ ಪ್ರತಿಯೊಂದು ಪಾತ್ರದಲ್ಲಿಯೂ ಒಳ್ಳೆಯ ಸಂದೇಶ ಇತ್ತು. ಯಾವ ಚಿತ್ರದಲ್ಲೂ ಕೆಟ್ಟ ಅಂಶ ಇರಲಿಲ್ಲ. ಯುವಕರಿಗೆ ಸ್ಫೂರ್ತಿಯಾದವರು ಅಪೂರ್ವರವರು ಎಂದರು.



ಡಾ. ರಾಜ್‌ಕುಮಾರ್ ಅವರ ಪ್ರತಿಭೆಯ ಬೆಳಕು ಅಪ್ಪೂರವರಲ್ಲಿ ಸ್ಪಷ್ಟವಾಗಿ ಕಾಣಿಸಿತು. ಬಾಲ್ಯದಿಂದಲೇ ಸಿನಿರಂಗದಲ್ಲಿ ಸಕ್ರಿಯರಾಗಿದ್ದ ಅವರು, ಸುಮಾರು ನಾಲ್ಕು ದಶಕಗಳ ಕಾಲ ಜನಮನಗಳಲ್ಲಿ ಅಚ್ಚಳಿಯದ ಗುರುತು ಬರೆದಿದ್ದಾರೆ. ಇಂದಿಗೂ ಅವರ ನಟನೆ, ನಡತೆ ಹಾಗೂ ಸಮಾಜಮುಖಿ ಚಿಂತನೆ ಯುವ ಪೀಳಿಗೆಗೆ ದಾರಿ ತೋರಿಸುತ್ತಿದೆ ಎಂದರು.

ರೋಟರಿ ಟ್ರಸ್ಟ್‌ನ ಕಾರ್ಯದರ್ಶಿ ರವಿಕುಮಾರ್ ಮಾತನಾಡಿ, ಈ ದೇಶ ಮತ್ತು ರಾಜ್ಯ ಕಂಡ ಅಪರೂಪದ ವ್ಯಕ್ತಿತ್ವ ಪುನೀತ್ ರಾಜಕುಮಾರ್ ಅವರು ಇಂದು ನಮ್ಮೊಂದಿಗೆ ಇಲ್ಲದಿದ್ದರೂ, ಪ್ರತಿಯೊಬ್ಬ ಮನೆಯ ಮಗನಾಗಿ ಜನಮನಗಳಲ್ಲಿ ಜೀವಂತವಾಗಿದ್ದಾರೆ. ಅವರು ಮಾಡಿದ ದಾನಧರ್ಮಗಳು ಎಂದಿಗೂ ಪ್ರಸ್ತುತವಾಗಿಯೇ ಇರುತ್ತವೆ. ಅವರ ಹಾದಿಯಲ್ಲಿ ನಾವೆಲ್ಲ ನಡೆಯೋಣ ಎಂದರು.

ಜೂನಿಯರ್ ಪುನೀತ್ ರಾಜಕುಮಾರ್ ಅಪ್ಪು ಮಾತನಾಡಿ, ಪುನೀತ್ ರಾಜಕುಮಾರ್ ಎಂದಿಗೂ ನಮ್ಮೊಂದಿಗೆ ಇದ್ದಾರೆ. ಅವರು ಮಾಡಿದ ಪುಣ್ಯದ ಕಾರ್ಯಗಳು ಜನಮನದಲ್ಲಿ ಸದಾ ಉಳಿದುಕೊಳ್ಳುತ್ತವೆ. ಅವರಿಂದ ಲಕ್ಷಾಂತರ ಮಂದಿ ಸ್ಫೂರ್ತಿಗೊಂಡು ರಕ್ತದಾನ, ನೇತ್ರದಾನ ಮಾಡುವ ಹಾದಿಯಲ್ಲಿ ನಡೆಯುತ್ತಿದ್ದಾರೆ ಎಂದರು.

ಪುರಸಭಾ ಸದಸ್ಯ ಪ್ರಜ್ವಲ್, ಜಿಲ್ಲಾ ಬೆಳೆಗಾರರ ಸಂಘದ ಕಾರ್ಯದರ್ಶಿ ಲೋಹಿತ್ ಕೌಡಹಳ್ಳಿ ಮಾತನಾಡಿದರು.

ಕೌಶಿಕ್, ರೋಟರಿ ವಿಶೇಷ ಚೇತನ ಶಾಲೆಯ ಮುಖ್ಯೋಪಾಧ್ಯಾಯ ಈಶ್ವರಪ್ಪ, ಶಿಕ್ಷಕರು, ಸುಬೇಂದ್ರ ನಾಯ್ಡು, ಕುಶಾಲನಗರ ಗೆಳೆಯರ ಬಳಗದ ಬಾಲು, ವಿನಯ್, ರಘು, ಆದರ್ಶ, ಪ್ರೀತಮ್, ಮಣಿ, ನಿಖಿಲ್, ಆಟೋ ಜಾನಿ ಮತ್ತಿತರರು ಉಪಸ್ಥಿತರಿದ್ದರು.

## ಮುಖ್ಯಮಂತ್ರಿ ಪರಿಹಾರ ನಿಧಿ ಕಲ್ಪಿಸುವಂತೆ ಮನವಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಬೆಂಗಳೂರಿನ ಮುಖ್ಯಮಂತ್ರಿ ಗೃಹ ಕಚೇರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶಾಸಕ ಸಿ.ಎನ್.ಬಾಲಕೃಷ್ಣ ಗುರುವಾರ ಭೇಟಿ ಮಾಡಿ, ಮುಖ್ಯಮಂತ್ರಿಗಳ ಪರಿಹಾರ ನಿಧಿ ಯೋಜನೆಯಡಿ ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡುವಂತೆ ಮನವಿ ಮಾಡಿದರು.



ಚನ್ನರಾಯಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ವಿವಿಧ ಕಾಯಿಲೆಗಳು ಹಾಗೂ ಅಪಘಾತಗಳಿಗೆ ಒಳಗಾದ ಬಡವರು ಚಿಕಿತ್ಸೆಗಾಗಿ ಸಾಕಷ್ಟು ಖರ್ಚು ವೆಚ್ಚ ಮಾಡಿದ್ದಾರೆ. ಚಿಕಿತ್ಸೆ ಸಲುವಾಗಿ ಸಾಲ ಮಾಡಿಕೊಂಡಿದ್ದು ಜೀವನ ನಡೆಸಲಾಗದಷ್ಟು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ತಿಳಿಸಿದರು. ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೆಲವರು ತುಂಬಾ ಕಡುಬಡವರು ಇದ್ದು ಚಿಕಿತ್ಸೆಗಾಗಿ ಹೆಚ್ಚಿನ ಖರ್ಚು ಮಾಡಿದ್ದಾರೆ. ತಲಾ 17 ಲಕ್ಷ ರೂ. ಮೀರಿ ಖರ್ಚಾಗಿದೆ. ಇದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಬೇಕು. ಅದರ ಸಲುವಾಗಿ ನಾನೇ ಖುದ್ದಾಗಿ ಬಂದಿದ್ದೇನೆ. ದಯವಿಟ್ಟು ಕ್ಷೇತ್ರದ ಫಲಾನುಭವಿಗಳ ಮೇಲೆ ದಯೆ ತೋರಿ ಎಂದು ಮನವಿ ಮಾಡಿದರು.

## ಬಿಸ್ಲೆ ಘಾಟ್‌ನಲ್ಲಿ ಉರುಳಿ ಬಿದ್ದ ಮಿನಿ ಬಸ್: ಒಬ್ಬ ಸಾವು



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ತಾಲ್ಲೂಕಿನ ವನಗೂರು ಸಮೀಪದ ಕುಣ್ಕೇರಿ ಗ್ರಾಮದ ಕುಕ್ಕೆ ಸುಬ್ರಹ್ಮಣ್ಯಕ್ಕೆ ಮದುವೆಗೆಂದು ಹೊರಟಿದ್ದ 23 ಜನರಿದ್ದ ವ್ಯಾನ್ ಬಿಸ್ಲೆ ಘಾಟ್ ತಿರುವಿನಲ್ಲಿ 20 ಅಡಿ ಎತ್ತರದಿಂದ ಮಗುಚಿ ಬಿದಿದ್ದು ಒಬ್ಬರು ಮೃತಪಟ್ಟು ಎಂಟು ಜನರು ಗಂಭೀರ ಗಾಯಗೊಂಡಿದ್ದಾರೆ. ವನಗೂರು ಎಸ್ಟೇಟ್ ನಿವಾಸಿ ಶಿವರಾಜ್ (56) ಪುತ್ತೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಅರಣ್ಯ ಇಲಾಖೆ ನಿರ್ಲಕ್ಷ್ಯ: ಬಿಸಿಲೆ ಘಾಟ್ ತಿರುವಿನಲ್ಲಿ ರಸ್ತೆಯ ಪಕ್ಕದಲ್ಲಿ ತೆಗೆದ ಚರಂಡಿ ಮುಚ್ಚದೆ 15 ದಿನಗಳಿಂದ ಹಾಗೆ ಬಿಟ್ಟಿದ್ದು ಕಾಮಗಾರಿ ಜಾಗದಲ್ಲಿ ಯಾವುದೇ ನಾಮಫಲಕ ಹಾಕದೆ ಕಿರಿದಾದ ಸಿಮೆಂಟ್ ರಸ್ತೆ ಚರಂಡಿ ಮುಚ್ಚದೆ ಇರುವುದು ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಲೋಕೋಪಯೋಗಿ ಇಲಾಖೆ ತಡೆಗೋಡೆ ಕಾಮಗಾರಿ ಮಾಡುವಾಗ ವಲಯ ಅರಣಾಧಿಕಾರಿ ಕೃಷ್ಣ ಜೆಸಿಬಿಯನ್ನು ವಶಕ್ಕೆ ಪಡೆದಿದ್ದು ಕಾಮಗಾರಿಗೆ ಅಡ್ಡಿಪಡಿಸಿ ಅಪಘಾತಕ್ಕೆ ಕಾರಣ ಎಂದು ಆರೋಪಿಸಲಾಗುತ್ತಿದೆ

ಈ ಭಾಗದಲ್ಲಿ ಬೆಳಗಿನ ಸಮಯ ಮಂಜು ಮುಸುಕಿದ ವಾತಾವರಣ ಇದ್ದ ಕಾರಣ ಎದುರುಗಡೆ ಬಂದ ವಾಹನಕ್ಕೆ ಜಾಗ ಬಿಡುವಾಗ ಚಾಲಕನ ನಿಯಂತ್ರಣ ತಪ್ಪಿ ಬಸ್ 30 ಅಡಿ ಆಳಕ್ಕೆ ಮಗುಚಿ ಬಿದ್ದಿದೆ. ಘಟನೆಯಲ್ಲಿ ನಾಲ್ವರ ಸ್ಥಿತಿ ಚಿಂತಾಜನಕವಾಗಿದೆ. ಉಳಿದವರು ಸಣ್ಣಪುಟ್ಟ ಗಾಯಗಳಿಂದ ಬಳಲುತ್ತಿದ್ದಾರೆ. ಎಲ್ಲರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದೆ.

## ಕೇಬಲ್ ಅಳವಡಿಕೆ ಕಾಮಗಾರಿಗೆ ಭೂಮಿಪೂಜೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಪುರಸಭಾ ವ್ಯಾಪ್ತಿಯ ಜನಜಂಗುಳಿ ಪ್ರದೇಶಗಳಲ್ಲಿ ಸುಮಾರು 2.52 ಕೋಟಿ ರೂ. ವೆಚ್ಚದಲ್ಲಿ ಎಲ್‌ಟಿಎಬಿ ಕೇಬಲ್ ಅಡಿಯಲ್ಲಿ ಅಳವಡಿಸುವ ಕೆಲಸ ಆರಂಭವಾಗಲಿದೆ ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.



ಪಟ್ಟಣದ ಸ್ವಾಮಿ ದೇವಸ್ಥಾನದ ಮುಂಭಾಗ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಪಟ್ಟಣ ಪ್ರದೇಶಗಳಲ್ಲಿ ಕಟ್ಟಡಗಳು ಪರಸ್ಪರ ಹತ್ತಿರವಾಗಿರುವುದರಿಂದ ಹಾಗೂ ರಥೋತ್ಸವ ಸೇರಿ ವಿವಿಧ ಸಂದರ್ಭಗಳಲ್ಲಿ ವಿದ್ಯುತ್ ಅವಘಡಗಳು ಸಂಭವಿಸದಂತೆ ನೋಡಿಕೊಳ್ಳುವುದು ಈ ಯೋಜನೆಯ ಉದ್ದೇಶವಾಗಿದೆ ಎಂದು ಹೇಳಿದರು.

# ವಿದ್ಯಾರ್ಥಿಗಳಿಗೆ ಕಳಪೆ ಆಹಾರ: ವರದಿಗೆ ಸೂಚನೆ

## ಗುಣಮಟ್ಟ ಕಾಪಾಡಿಕೊಳ್ಳಲು ಹಿಂದೇಟು ಸರಿಯಲ್ಲ | ಜಿಪಂ ಉಪಕಾರ್ಯದರ್ಶಿ ಎಚ್ಚರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಸರ್ಕಾರಿ ಶಾಲಾ ಕಾಲೇಜುಗಳ ವಿದ್ಯಾರ್ಥಿ ನಿಲಯಗಳಲ್ಲಿ ಮಕ್ಕಳಿಗೆ ನೀಡುವ ಆಹಾರ ಸಂಪೂರ್ಣ ಕಳಪೆಯಾಗಿದೆ, ಕೆಲವು ಹಾಸ್ಟೆಲ್‌ಗಳಿಗ ಭೇಟಿ ನೀಡಿದಾಗ ಈ ವಿಚಾರ ನನ್ನ ಗಮನಕ್ಕೆ ಬಂದಿದೆ. ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ವಿರುದ್ಧ ಮೇಲಧಿಕಾರಿಗಳಿಗೆ ವರದಿ ಸಲ್ಲಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಹಾಗೂ ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ ಎಂ.ಬಾಬು ಹೇಳಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಾಮಾನ್ಯಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಕೆಲವು ವಿದ್ಯಾರ್ಥಿ ನಿಲಯಗಳಿಗೆ ಭೇಟಿ ನೀಡಿ ಮಕ್ಕಳ ತಿಂಡಿ, ಊಟವನ್ನು ಸೇವನೆ ಮಾಡಿದಾಗ ಕೇವಲ ಒಂದೆರಡು ತರಕಾರಿಗಳನ್ನು ಬಳಕೆ ಮಾಡಿ ಸಾಂಬಾರು ಮಾಡಿರುವುದು ಕಂಡುಬಂದಿತ್ತು. ಕೇವಲ ಕುಂಬಳ ಕಾಯಿ, ಮಂಗಳೂರು ಸೌತೆಕಾಯಿ ಮಾತ್ರವಿತ್ತು. ಸ್ಥಳೀಯವಾಗಿ ದೊರೆಯುವ ಹಸಿ ತರಕಾರಿ, ಕಾಳು, ಸೊಪ್ಪು, ಬಿನ್ಸ್ ಬಳಕೆಯಾಗುತ್ತಿಲ್ಲ. ಇನ್ನೂ ಬೆಳಗ್ಗಿನ ತಿಂಡಿಯ ಕಥೆ ಹೇಳತೀರದಾಗಿದೆ. ನಮ್ಮ ಸರ್ಕಾರಿ ಶಾಲೆ, ಕಾಲೇಜು, ವಿದ್ಯಾರ್ಥಿ ನಿಲಯಗಳಲ್ಲಿ ಗ್ರಾಮೀಣ ಭಾಗದ ಬಡಮಕ್ಕಳೇ ವಾಸಿಸುತ್ತಿದ್ದಾರೆ. ಅವರಿಗೆ ಪೋಷಕಾಂಶಯುಕ್ತ ಆಹಾರ ಪದಾರ್ಥ ಕೊಡದಿದ್ದರೇ ಆರೋಗ್ಯವಂತರಾಗಿ ಶಿಕ್ಷಣ ಪಡೆಯಲು ಹೇಗೆ ಸಾಧ್ಯ. ಪ್ರಾಥಮಿಕ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹೆಚ್ಚಿನದಾಗಿ ಪೋಷಕಾಂಶಯುಕ್ತ ಆಹಾರ ಅತ್ಯವಶ್ಯಕವಾಗಿದೆ ಎಂದರು. ಸರ್ಕಾರದ ನಿಯಮಾನುಸಾರ ವಿದ್ಯಾರ್ಥಿ ನಿಲಯಗಳಿಗೆ ತರಕಾರಿ ವಿತರಣೆ ಮಾಡದ ಏಜೆನ್ಸಿಯವರನ್ನು ಕೂಡಲೇ ಬದಲಾಯಿಸಬೇಖು. ನಿಗದಿತ ತರಕಾರಿ ನೀಡಿರುವ ಕುರಿತು ವಿದ್ಯಾರ್ಥಿ ನಿಲಯದ ಮೇಲ್ವಿಚಾರಕರಿಂದ ಲಿಖಿತ ಮಾಹಿತಿ ಪಡೆದುಕೊಳ್ಳಬೇಕು. ಪ್ರಮುಖವಾಗಿ ಅಡುಗೆ ಸಿಬ್ಬಂದಿ ಗುಣಮಟ್ಟದಿಂದ ಆಹಾರ ತಯಾರಿಕೆ ಮಾಡುವ ಕುರಿತು ಎಚ್ಚರಿಕೆ ವಹಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.



**ವಿದ್ಯಾರ್ಥಿ ವೇತನ ನೀಡಿಲ್ಲ:** ತಾಲ್ಲೂಕಿನಲ್ಲಿ ಕಳೆದ ಮತ್ತು ಈ ಸಾಲಿನ ವಿದ್ಯಾರ್ಥಿ ವೇತನ ನೀಡಿಲ್ಲದಿರುವ ಬಗ್ಗೆ ಮಾಹಿತಿ ಪಡೆದುಕೊಂಡ ಅವರು, ಸರ್ಕಾರದ ಮಟ್ಟದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಬಿಡುಗಡೆಯಾಗುತ್ತಿದೆ. ಆದರೆ ಸ್ಥಳೀಯ ಮಟ್ಟದಲ್ಲಿ ವಿಳಂಬ ಯಾಕೇ ಆಗುತ್ತಿದೆ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ಆಯಾ ಸಾಲಿನ ವಿದ್ಯಾರ್ಥಿ ವೇತನ ಹಾಗು ಇತರೆ ಪ್ರತಿಭಾ ಪುರಸ್ಕಾರದ ಗೌರವಧನ ನಿಗದಿತ ಅವಧಿಯಲ್ಲಿ ಬಿಡುಗಡೆ ಮಾಡುವ ಕುರಿತು ಗಮನ ಹರಿಸಬೇಕು ಎಂದು ತಿಳಿಸಿದರು.

**ಸಮೀಕ್ಷೆ ಶೇ.89.31:** ರಾಜ್ಯ ಸರ್ಕಾರ ಆರಂಭಿಸಿರುವ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ ಕಾರ್ಯ ಶೇ.89.31ರಷ್ಟು ನಡೆದಿರುವುದು ತೃಪ್ತಿದಾಯಕವಾಗಿಲ್ಲ. ಹಾಸನ ಸೇರಿ ಇತರೆ ತಾಲ್ಲೂಕುಗಳು ಶೇ.90ರಿಂದ ಶೇ.94ರಷ್ಟು ಸಾಧನೆ ಮಾಡಿವೆ. ನಿಗದಿತ ಅವಧಿಯೊಳಗೆ ನಮ್ಮ ತಾಲ್ಲೂಕು ಕೂಡ ಶೇ.100ರಷ್ಟು ಗುರಿ ಮುಟ್ಟಬೇಕೆಂದು ಬಿಸಿಎಂ ಅಧಿಕಾರಿಗೆ ಸೂಚನೆ ನೀಡಿದರು. ಸಮೀಕ್ಷೆ ಕಾರ್ಯದಿಂದ ಎಲ್ಲಾ ಶಿಕ್ಷಕರು ಬಿಡುಗಡೆಗೊಂಡಿದ್ದಾರೆ. ಅದರಿಂದ ಕಾರ್ಯಕ್ಕೆ ಸ್ವಲ್ಪಮಟ್ಟಿಗೆ ಹಿನ್ನಡೆಯಾಗಿದೆ. ಗ್ರಾ.ಪಂ. ಮಟ್ಟದ ಅಧಿಕಾರಿಗಳಿಂದ ಸಮೀಕ್ಷೆ ಮುಂದುವರಿದಿದೆ. ತಾಲ್ಲೂಕಿನಲ್ಲಿ ಒಟ್ಟು 55.904 ಮನೆಗಳಿದ್ದು, 2,13,751 ಜನಸಂಖ್ಯೆ ಇದೆ. ಈ ಪೈಕಿ ಇದುವರೆಗೆ 54,648 ಮನೆಗಳಿಂದ 1,90,903 ಮಂದಿಯ ಸಮೀಕ್ಷೆ ಪೂರ್ಣಗೊಂಡಿದೆ. ನಿಗದಿತ ಅವಧಿಯೊಳಗೆ ಸಮೀಕ್ಷೆ ಕಾರ್ಯ ಪೂರ್ಣಗೊಳ್ಳಿಸಲಾಗುವುದು ಎಂದು ಬಿಸಿಎಂ ಇಲಾಖೆ ಅಧಿಕಾರಿ ಸಭೆಗೆ ಮಾಹಿತಿ ನೀಡಿದರು.



**ರೈತರಿಂದ ಬೆಳೆ ವಿಮೆ ಮಾಡಿಸಿ:** ಜಿಲ್ಲೆಯ ಬೇರೆ ತಾಲ್ಲೂಕುಗಳಿಗೆ ಹೋಲಿಸಿದರೆ ಅರಕಲಗೂಡು ತಾಲ್ಲೂಕಿನಲ್ಲಿ ಬೆಳೆ ವಿಮೆ ಅಷ್ಟೊಂದು ತೃಪ್ತಿದಾಯಕವಾಗಿಲ್ಲ. ಇತ್ತೀಚೆಗೆ ಸುರಿದ ಮಳೆಯಿಂದ ರೈತರ ಬೆಳೆಗಳು ಹಾನಿಗೊಳಗಾಗಿವೆ. ಈ ಹಂತದಲ್ಲಿ ವಿಮೆ ಮಾಡಿಸಿದ್ದರೇ ಸೂಕ್ತ ಪರಿಹಾರ ದೊರೆಯುತ್ತಿತ್ತು. ಮುಂಗಾರು, ಹಿಂಗಾರು ಬೆಳೆಗಳಿಗೆ ನಿಗದಿಯಾಗಿರುವ ಬೆಳೆ ವಿಮೆ ಮಾಡಿಸಲು ಕೃಷಿ ಇಲಾಖೆ ಹೆಚ್ಚಿನ ಗಮನ ಹರಿಸಬೇಕಿದೆ. ಈ ನಿಟ್ಟಿನಲ್ಲಿ ಇಂದಿನಿಂದಲೇ ಗಮನರಿಸಿ ಎಂದು ಎಂ.ಬಾಬು ಕೃಷಿ ಅಧಿಕಾರಿಗೆ ಸಲಹೆ ನೀಡಿದರು.

ತಾಲ್ಲೂಕಿನಲ್ಲಿ 47 ಸಾವಿರ ಹೆಕ್ಟೆರ್ ಕೃಷಿ ಪ್ರದೇಶವಿದ್ದು, 41 ಸಾವಿರ ಹೆಕ್ಟೆರ್ ನಲ್ಲಿ ಬೆಳೆಯನ್ನು ಕೈಗೊಳ್ಳಲಾಗಿದೆ. ಕಳೆದ ವರ್ಷ ಬೆಳೆ ವಿಮೆ ಮಾಡಿಸಿದ ರೈತರಿಗೆ ನೇರವಾಗಿ ಬೆಳೆ ವಿಮೆ ಅವರ ಬ್ಯಾಂಕ್ ಖಾತೆಗೆ ಜಮಾ ಆಗಿದೆ. ಈ ಸಾಲಿನಲ್ಲಿ 216 ಮಂದಿ ಬೆಳೆ ವಿಮೆ ಮಾಡಿಸಿದ್ದಾರೆ. ಕಳೆದ ವಾರ ಬಿದ್ದ ಮಳೆಯಿಂದ 10 ಹೆಕ್ಟೆರ್‌ನಲ್ಲಿ ನೀರಾವರಿ ಪ್ರದೇಶದಲ್ಲಿನ ಭತ್ತ ಹಾನಿಯಾಗಿದೆ. ಈ ಬಗ್ಗೆ ವರದಿ ಸಲ್ಲಿಸಲಾಗುವುದು ಎಂದು ಕೃಷಿ ಅಧಿಕಾರಿ ಕವಿತಾ ಮಾಹಿತಿ ನೀಡಿದರು.

**ಎಕೋ ತಪಾಸಣೆಗೆ ಒತ್ತು ನೀಡಿ:** ಇತ್ತೀಚೆಗೆ ಹೃದಯಾಘಾತ ಪ್ರಕರಣಗಳು ಉಲ್ಬಣಗೊಳ್ಳುತ್ತಿದ್ದು, ಆರೋಗ್ಯ ಇಲಾಖೆ ವತಿಯಿಂದ ಹೆಚ್ಚಿನದಾಗಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜನೆ ಮಾಡಬೇಕಿದೆ. ಪ್ರಮುಖವಾಗಿ ಹೃದಯ ತಪಾಸಣಾ ಶಿಬಿರ ಆಯೋಜನೆ ಮಾಡುವ ವೇಳೆ ಇಸಿಜಿಯೊಂದಿಗೆ ಎಕೋ ತಪಾಸಣೆಗೆ ಹೆಚ್ಚು ಒತ್ತು ನೀಡಬೇಕು. ಅದರಿಂದ ಹೃದಯ ತೊಂದರೆ ಕಂಡುಬಂದರೇ ತ್ವರಿತವಾಗಿ ಚಿಕಿತ್ಸೆ ಕೊಡಲು ಅನುಕೂಲವಾಗುತ್ತದೆ. ಈ ಬಗ್ಗೆ ಹೆಚ್ಚಿನ ಗಮನಹರಿಸಬೇಕೆಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಪುಷ್ಪಲತಾ ಮತ್ತು ಸಾರ್ವಜನಿಕ ಆಸ್ಪತ್ರೆ ಆಡಳತಾಧಿಕಾರಿ ಡಾ.ಸ್ವಾಮೀಗೌಡ ಅವರಿಗೆ ಸೂಚನೆ ನೀಡಿದರು.

**ವಲಸೆ ಕಾರ್ಮಿಕರ ಸಮೀಕ್ಷೆ ಕೈಗೊಳ್ಳಿ:** ತಾಲ್ಲೂಕಿನಲ್ಲಿ ಸಾವಿರಾರು ಸಂಖ್ಯೆಯಲ್ಲಿ ಹೊರ ರಾಜ್ಯದಿಂದ ವಲಸೆ ಕಾರ್ಮಿಕರು ನೆಲಸಿದ್ದು, ಈ ಬಗ್ಗೆ ಸಮಿತಿ ರಚನೆ ಮಾಡಿ ಸಮೀಕ್ಷೆ ಕೈಗೊಳ್ಳುವುದು ಸೂಕ್ತ ಎಂದು ತಾಪಂ ಆಡಳಿತಾಧಿಕಾರಿ ಬಾಬು ಸಭೆಯಲ್ಲಿ ಪ್ರಸ್ತಾಪಿಸಿದರು.

ಅಡಿಕೆ ಕಣ, ತೋಟದ ಕೆಲಸ ರೈತ ಕೃಷಿ ಜಮೀನಿನ ಕೆಲಸ,ಗಾರೆ ಕೆಲಸ ಹೀಗೆ ಹಲವು ಕೆಲಸಗಳಲ್ಲಿ ವಲಸೆ ಕಾರ್ಮಿಕರು ತೊಡಗಿಕೊಂಡಿರುವ ಬಗ್ಗೆ ವರದಿಯಾಗಿದೆ. ಅಲ್ಲದೆ ಮೂಲಸೌಕರ್ಯವಿಲ್ಲದ ಕಡೆ, ಅಪ್ರಾಪ್ತ ಮಕ್ಕಳು ಕೂಡ ಇವರೊಂದಿಗೆ ನೆಲೆಸಿದ್ದಾರೆ. ಕೆಲಸಕ್ಕೆ ಇಟ್ಟುಕೊಂಡಿರುವ ಮಾಲೀಕರೊಂದಿಗೆ ಸಮಾಲೋಚನೆ ನಡೆಸುವುದು ಕೂಡ ಅವಶ್ಯವಾಗಿದೆ. ಸಮಿತಿ ರಚನೆ ಮಾಡಿಕೊಂಡು ಕಾರ್ಯನಿರ್ವಹಿಸಿ ಎಂದು ಹೇಳಿದರು. ತಾಪಂ ಕಾರ್ಯನಿರ್ವಹಣಾಧಿಕಾರಿ ಶ್ರೀನಿವಾಸ್ ಹಾಗೂ ಇತರ ಅಧಿಕಾರಿಗಳಿದ್ದರು.

## ಇಂದು ಅಂಬೇಡ್ಕರ್ ಪುತ್ಥಳಿ ಪ್ರತಿಷ್ಠಾಪನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಚನ್ನರಾಯಪಟ್ಟಣ ತಾಲ್ಲೂಕು ಕಚೇರಿ ಎದುರು ಅ.31ರ ಶುಕ್ರವಾರ ಡಾ. ಬಿ.ಆರ್. ಅಂಬೇಡ್ಕರ್ ಕಂಚಿನ ಪುತ್ಥಳಿ ಪ್ರತಿಷ್ಠಾಪನೆ ಮಾಡಲಾಗುವುದು ಎಂದು ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಹಾಗೂ ವಿವಿಧೋದ್ದೇಶ ಸಮಾಜ ಸೇವಾ ಸಮಿತಿ ಗೌರವ ಅಧ್ಯಕ್ಷ ರಂಗಪ್ಪ ಹೇಳಿದರು.




ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಹಾಗೂ ವಿವಿಧೋದ್ದೇಶ ಸಮಾಜ ಸೇವಾ ಸಮಿತಿ ಹೋರಾಟ ಮಾಡಿದ ಫಲವಾಗಿ ಚನ್ನರಾಯಪಟ್ಟಣ ಪುರಸಭೆ ಹಾಗು ಶಾಸಕ ಸಿ.ಎನ್. ಬಾಲಕೃಷ್ಣ ಅವರ ನೆರವಿನಿಂದ ಅಂಬೇಡ್ಕರ್ ಪುತ್ಥಳಿ ಪ್ರತಿಷ್ಠಾಪನೆ ಮಾಡಲಾಗುವುದು ಎಂದು ತಿಳಿಸಿದರು.

ಅ.31 ರಂದು ಬೆಳಿಗ್ಗೆ 9 ಗಂಟೆಗೆ ಪುತ್ಥಳಿ ಪ್ರತಿಷ್ಠಾಪನೆ ಮಾಡುತ್ತಿದ್ದು ಕಾರ್ಯಕ್ರಮದಲ್ಲಿ ಶಾಸಕ ಸಿ.ಎನ್ .ಬಾಲಕೃಷ್ಣ, ಪುರಸಭೆ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಪುರಸಭೆ ಮುಖ್ಯಾಧಿಕಾರಿ ಸೇರಿದಂತೆ ದಲಿತ, ರೈತಪರ ಸಂಘಟನೆಗಳ ಮುಖಂಡರು ಭಾಗವಹಿಸುವರು. ಸಮಿತಿಯಿಂದ ಅನ್ನದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಂಬೇಡ್ಕರ್ ಅಭಿಮಾನಿಗಳು, ಅನುಯಾಯಿಗಳು, ದಲಿತಪರ ಸಂಘಟನೆ ಕಾರ್ಯಕರ್ತರು ಭಾಗವಹಿಸಬೇಕು ಎಂದು ಮನವಿ ಮಾಡಿದರು. ಸಮಿತಿ ಪ್ರಧಾನ ಕಾರ್ಯದರ್ಶಿ ಕೆ.ವಿ.ಸತೀಶ್ ಇದ್ದರು.

## ಗ್ರಾಮೀಣ ಮಕ್ಕಳ ಪ್ರತಿಭೆಗೆ ಪ್ರೋತ್ಸಾಹ ಸಿಗಲಿ: ರಾಜಶೇಖರ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಗ್ರಾಮೀಣ ಪ್ರದೇಶದ ಮಕ್ಕಳ ಪ್ರತಿಭೆಗೆ ಕೊರತೆಯಿಲ್ಲ, ಆದರೆ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಅಗತ್ಯವಿದೆ ಎಂದು ಭೀಮಾ ಕೋರೆಗಾಂವ್ ವಿಜಯೋತ್ಸವ ಸಮಿತಿ ಹಾಗೂ ಕಲ್ಚರಲ್ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ರಾಜಶೇಖರ್ ಹೇಳಿದರು.



ಪಟ್ಟಣದ ಶಾಪ್ ಸಿದ್ದೇಗೌಡ ಹಿರಿಯ ಪ್ರಾಥಮಿಕ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಟ್ರ್ಯಾಕ್‌ಸೂಟ್‌ಗಳನ್ನು ವಿತರಿಸಿ ಮಾತನಾಡಿ, ನಗರ ಪ್ರದೇಶದ ಮಕ್ಕಳಿಗೆ ಶಿಕ್ಷಣ, ಕ್ರೀಡೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಕಲಿಯಲು ಸಾಕಷ್ಟು ಸೌಲಭ್ಯಗಳು ದೊರಕುತ್ತವೆ. ಆದರೆ ಗ್ರಾಮೀಣ ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯುತ್ತಿದ್ದರೂ, ಅವರ ಪ್ರತಿಭೆ ಬೆಳೆಯಲು ಅಗತ್ಯವಾದ ಸೌಲಭ್ಯ ಮತ್ತು ಮಾರ್ಗದರ್ಶನದ ಕೊರತೆ ಇದೆ ಎಂದು ಹೇಳಿದರು.

ನಮ್ಮ ಟ್ರಸ್ಟ್ ಗ್ರಾಮೀಣ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಮತ್ತು ಸಹಕಾರ ನೀಡುತ್ತಾ ಬಂದಿದೆ. ಈ ಪ್ರಯತ್ನದ ಭಾಗವಾಗಿ ವಿದ್ಯಾರ್ಥಿಗಳಿಗೆ ಆಟೋಟಗಳಲ್ಲಿ ಧರಿಸಲು ಅನುಕೂಲವಾಗುವಂತಹ ಟ್ರ್ಯಾಕ್ ಸೂಟ್‌ಗಳನ್ನು ವಿತರಿಸಿದ್ದು, ಮಕ್ಕಳು ಕ್ರೀಡೆಯಲ್ಲಿ ಹೆಚ್ಚಿನ ಸಾಧನೆ ಮಾಡಲಿ ಎಂದು ಹಾರೈಸುತ್ತೇವೆ ಎಂದರು.

ಟ್ರಸ್ಟ್ ನ ಸಂಯೋಜಕ ಶಾಂತರಾಜ್ ಹೆನ್ನಲಿ ಮಾತನಾಡಿ, ಟ್ರಸ್ಟ್ ಹಲವು ಸಮಾಜಮುಖಿ ಕಾರ್ಯಗಳನ್ನು ಕೈಗೊಂಡಿದ್ದು, ಈ ಹಿಂದೆ ಹಲವು ಶಾಲೆಗಳಿಗೆ ಅಗತ್ಯ ವಸ್ತುಗಳನ್ನು ವಿತರಿಸಿದೆ ಎಂದರು. ಸಮಾಜದ ಹಿತಕ್ಕಾಗಿ ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಸೇವೆಯ ಕ್ಷೇತ್ರಗಳಲ್ಲಿ ಸಹಾಯಹಸ್ತ ಚಾಚುವ ಯೋಜನೆಗಳನ್ನು ಮುಂದಿನ ದಿನಗಳಲ್ಲಿ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ವಿದ್ಯಾರ್ಥಿಗಳು ಶೈಕ್ಷಣಿಕ ಕ್ಷೇತ್ರದ ಜೊತೆಗೆ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಮುನ್ನಡೆಸಬೇಕು. ಅದಕ್ಕಾಗಿ ಟ್ರಸ್ಟ್ ಸದಾ ಮಕ್ಕಳಿಗೆ ಪ್ರೋತ್ಸಾಹ ನೀಡಲು ಸಿದ್ಧವಾಗಿದೆ ಎಂದು ಹೇಳಿದರು.

ನಿವೃತ್ತ ಶಿಕ್ಷಕ ಲಕ್ಕಪ್ಪ, ಭೀಮಾ ಕೋರೆಗಾಂವ್ ವಿಜಯೋತ್ಸವ ಸಮಿತಿಯ ದೇವರಾಜ್ ಬೈಕೆರೆ, ಪ್ರಶಾಂತ್ ಕಲ್ಗನೆ, ನಲ್ಲೂಲ್ಲಿ ಈರಯ್ಯ, ಮಳಲಿ ಗೋಪಾಲ್, ಪುನೀತ್ ಬೆಳಗೋಡು, ಸಂದೀಪ ಬೆಳಗೋಡು, ನೀಡನೂರು ಜಗದೀಶ್, ಗಂಗಣ್ಣ, ಹಳೆಕೆರೆ ಚಂದ್ರು, ಅನಿಲ್ ಬಿಳಿಸರೆ, ಕುಮಾರ್ ಕ್ಯಾಮನಹಳ್ಳಿ ಮತ್ತು ದಿನೇಶ್ ಗೌಡ ಹೆನ್ನಲಿ ಇತರರು ಇದ್ದರು.

## ತರಕಾರಿ ತರಲು ಮಕ್ಕಳ ಬಳಕೆ: ಮುಖ್ಯ ಶಿಕ್ಷಕನಿಗೆ ತರಾಟೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಶಾಲಾ ಮಕ್ಕಳನ್ನು ತರಕಾರಿ, ಮೊಟ್ಟೆ ತರಲು ಹಾಗೂ ಇತರೆ ಚಟುವಟಿಕೆಗಳಿಗೆ ಬಳಕೆ ಮಾಡುವುದು ಕಂಡುಬಂದರೇ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಾಗುವುದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪಿ.ನಾರಾಯಣ ಶಿಕ್ಷಕರಿಗೆ ಎಚ್ಚರಿಕೆ ನೀಡಿದ್ದಾರೆ.



ಪಟ್ಟಣದ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯಶಿಕ್ಷಕ ವಸಂತ್ ಮತ್ತು ಇತರೆ ಸಹ ಶಿಕ್ಷಕರು ಹಾಗೂ ಅಡುಗೆ ಸಿಬ್ಬಂದಿಗಳೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ಮಾತನಾಡಿದ ಅವರು, ಶಾಲೆಯ ಮಕ್ಕಳನ್ನು ಮೊಟ್ಟೆ ಮತ್ತು ತರಕಾರಿ ತರಲು ಬಳಕೆ ಮಾಡಿಕೊಂಡಿರುವ ಕುರಿತು ಸಾರ್ವಜನಿಕ ವಲಯ ಮತ್ತು ಪೋಷಕರಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಶಾಲೆಯಲ್ಲಿ ಶಿಕ್ಷಕರು, ಅಡುಗೆಯವರು ಇದ್ದರೂ ಕೂಡ ಶಾಲಾ ಅವಧಿಯಲ್ಲಿ ಹೇಗೆ ಮಕ್ಕಳಿಂದ ಈ ಕೆಲಸ ಮಾಡಿಸಿದ್ದೀರಿ ಎಂದು ಮುಖ್ಯ ಶಿಕ್ಷಕ ವಸಂತ್ ಅವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರಲ್ಲದೆ ಈ ಬಗ್ಗೆ ಶೋಕಾಸ್ ನೋಟಿಸ್ ನೀಡಲಾಗುವುದು ಎಂದು ಎಚ್ಚರಿಸಿದರು.ಬಿಇಒ ಕಚೇರಿ ಆವರಣದಲ್ಲಿನ ಶಾಲೆಯಲ್ಲಿನ ಮಕ್ಕಳಿಂದ ಇಂತಹ ಕೆಲಸವನ್ನು ಮಾಡಿಸಲು ಹೇಗೆ ಸಾಧ್ಯವಾಯಿತು. ಅಧಿಕಾರಿಗಳೆಂದರೇ ಭಯವಿಲ್ಲವೇ ಅಲ್ಲದೆ ಮಕ್ಕಳು ಪಟ್ಟಣದಿಂದ ಬಂದವರಾಗಿದ್ದಾರೆ. ಅವರ ಪೋಷಕರು ಮಕ್ಕಳು ತರಕಾರಿ, ಮೊಟ್ಟೆಯನ್ನು ಕೈಯಲ್ಲಿಡಿದು ಬರುತ್ತಿರುವುದನ್ನು ಕಂಡು ಗಾಬರಿಗೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ಯಾವುದೇ ಅನಾಹುತ ನಡೆದರೇ ಯಾರೂ ಹೊಣೆ, ಇಂತಹ ಬೇಜವಬ್ದಾರಿಯನ್ನು ನಾನು ಸಹಿಸುವುದಿಲ್ಲ ಎಂದು ಶಿಕ್ಷಕರು,ಅಡುಗೆ ಸಿಬ್ಬಂದಿ ವಿರುದ್ಧ ಹರಿಹಾಯ್ದರು.

ಶತಮಾನ ಪೂರೈಸಿರುವ ಈ ಶಾಲೆಗೆ ಸರ್ಕಾರದಿಂದ ವಿಶೇಷ ಅನುದಾನ ಬರುತ್ತಿದೆ. ಅದರಿಂದ ಅಗತ್ಯವಾದ ಮೂಲಸೌಕರ್ಯಗಳು ಮಕ್ಕಳಿಗೆ ದೊರೆಯಲಿದೆ. ಆಂಗ್ಲ ಮಾಧ್ಯಮ ಶಾಲೆಯಾಗಿಯೂ ಕಾರ್ಯನಿರ್ವಹಿಸುತ್ತಿದೆ. ಪೋಷಕರ ವಿಶ್ವಾಸ ಕೂಡ ಅಧಿಕವಾಗಿದೆ. ಇದನ್ನು ಅರಿತು ಶಿಕ್ಷಕರು ಕಾರ್ಯನಿರ್ವಹಿಸಬೇಕು. ಮತ್ತೊಮ್ಮೆ ಈ ರೀತಿಯಾಗಿ ವಿದ್ಯಾರ್ಥಿಗಳ ದುರ್ಬಳಕೆ ಕಂಡುಬಂದರೇ ಕಾನೂನು ರೀತಿ ಕ್ರಮ ಜರುಗಿಸಲಾಗುವುದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪಟ್ಟಣ ಸೇರಿದಂತೆ ತಾಲೂಕಿನ ಯಾವುದೇ ಶಾಲೆಗಳ ಮಕ್ಕಳನ್ನು ತರಕಾರಿ,ಮೊಟ್ಟೆ ಹಾಗೂ ಇತರೆ ಕಾರ್ಯಗಳಿಗೆ ಬಳಕೆ ಮಾಡುವುದು ಕಂಡುಬಂದರೇ ಆಯಾ ಕ್ಲಸ್ಟರ್‌ನ ಅಧಿಕಾರಿಗಳನ್ನು ನೇರವಾಗಿ ಹೊಣೆಯನ್ನಾಗಿ ಮಾಡಲಾಗುವುದು. ಕಡ್ಡಾಯವಾಗಿ ವಾರದ ಎಲ್ಲಾ ದಿನವು ಮೊಟ್ಟೆ,ಬಾಳೆ ಹಣ್ಣುಗಳನ್ನು ನೀಡಬೇಕಿದೆ. ಕೆಲವು ಶಾಲೆಗಳಲ್ಲಿ ವಾರದ ಒಂದೆರಡು ದಿನ ಮೊಟ್ಟೆ ನೀಡದೇ ಕೇವಲ ಬಾಳೆ ಹಣ್ಣು ನೀಡುತ್ತುರುವ ಬಗ್ಗೆ ಮಾಹಿತಿ ಲಭ್ಯವಾಗಿದೆ. ಅಂತಹ ಶಾಲೆಗಳ ಮುಖ್ಯಶಿಕ್ಷಕರ ಬಗ್ಗೆ ಗಮನಹರಿಸಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಭೆಯಲ್ಲಿ ಅಕ್ಷರ ದಾಸೋಹ ಅಧಿಕಾರಿ ರಂಗಸ್ವಾಮಿ ಇದ್ದರು.

## ವಾರ್ಡ್ ವ್ಯಾಪ್ತಿ ಪೌರ ಕಾರ್ಮಿಕರಿಗೆ ಪಾಲಿಕ ಸದಸ್ಯರಿಂದ ಗೌರವ

ಹಾಸನ: ಮಹಾನಗರ ಪಾಲಿಕೆ 1ನೇ ವಾರ್ಡ್ ಸದಸ್ಯ ಹೆಚ್.ಎಂ. ರಕ್ಷಿತ್ ಕುಮಾರ್ ಅವರು ತಮ್ಮ ವಾರ್ಡ್ ವ್ಯಾಪ್ತಿಯ ಪೌರ ಕಾರ್ಮಿಕರು ಸೇರಿ 20 ಸಿಬ್ಬಂದಿಗೆ ಮನೆಯಲ್ಲಿ ಔತಣಕೂಟ ಏರ್ಪಡಿಸಿ ಸಹಬಾಳ್ವೆಯ ಸಂದೇಶ ಸಾರಿದ್ದಾರೆ.



ಕಳೆದ ಎಂಟು ವರ್ಷಗಳಿಂದ ಇದೇ ಸಂಪ್ರದಾಯ ಮುಂದುವರಿಸಿಕೊಂಡು ಬಂದಿರುವ ಅವರು ಬುಧವಾರ ತಮ್ಮ ವಾರ್ಡ್‌ನಲ್ಲಿ ಸ್ವಚ್ಛತಾ ಕೆಲಸ ಮಾಡುವ ಪೌರ ಕಾರ್ಮಿಕರು, ನೀರುಗಂಟಿ, ಕಸ ಸಂಗ್ರಹ ಆಟೋ ಚಾಲಕ ಮತ್ತು ಕ್ಲೀನರ್ ಅವರನ್ನು ಮನೆಗೆ ಕರೆಸಿ ಉಪಚರಿಸಿದ್ದಾರೆ. ಜೊತೆಗೆ ಮಹಿಳಾ ಕಾರ್ಮಿಕರಿಗೆ ಬಾಗಿನ ವಿತರಿಸಿದರೆ ಪುರುಷರಿಗೆ ಒಂದು ಜೊತೆ ಬಟ್ಟೆ ನೀಡಿ ಸಹೋದರತ್ವ ಮೆರೆದಿದ್ದಾರೆ.

ಪ್ರತಿವರ್ಷ ಹಾಸನಾಂಬ ಜಾತ್ರಾ ಮಹೋತ್ಸವ ಮುಗಿದ ಬಳಿಕ ಅವರು ಈ ಕಾರ್ಯಕ್ರಮವನ್ನು ಮಾಡುತ್ತಾರೆ. ಹಾಸನಾಂಬ ಜಾತ್ರಾ ಮಹೋತ್ಸವಕ್ಕೆ ಹೊರ ಜಿಲ್ಲೆ ಹಾಗೂ ರಾಜ್ಯದಿಂದ ಸಾರ್ವಜನಿಕರು ಬಂದಿರುತ್ತಾರೆ. ಅಂತಹ ಸಂದರ್ಭದಲ್ಲಿ ನಗರವನ್ನು ಸ್ವಚ್ಛವಾಗಿಡುವಲ್ಲಿ ಪಾಲಿಕೆ ಸಿಬ್ಬಂದಿ ಶ್ರಮ ಹೆಚ್ಚಿರುತ್ತದೆ. ನಗರದ ಕೀರ್ತಿ ಹೆಚ್ಚಿಸುವವರಿಗೆ ಗೌರವಿಸುವುದು ನನ್ನ ಆದ್ಯತೆ. ಆದ್ದರಿಂದ ನನ್ನ ವಾರ್ಡ್‌ನ ಶ್ರಮಜೀವಿಗಳಿಗೆ ಈ ಮೂಲಕ ಗೌರವಿಸುತ್ತೇನೆ. ಜಾತಿ ಬೇಧವಿಲ್ಲದೆ ಕುಟುಂಬ ಸದಸ್ಯರಂತೆ ಅವರನ್ನು ಭಾವಿಸುತ್ತೇನೆ.

## ಇತಿಹಾಸದಲ್ಲಿ ಈ ದಿನ

### ಅಕ್ಟೋಬರ್-31

1941: ಅಮೆರಿಕಾದ ಪೆಂಟಗಾನ್ ಕಟ್ಟಡದ ನಿರ್ಮಾಣ ಪ್ರಾರಂಭವಾಯಿತು.

1947: ಸರ್ದಾರ್ ವಲ್ಲಭಭಾಯಿ ಪಟೇಲ್ ಭಾರತ ಸಂಯುಕ್ತ ರಾಜ್ಯಗಳಲ್ಲಿ ಜಮ್ಮು ಮತ್ತು ಕಾಶ್ಮೀರ ಸೇರಿಸಿಕೊಂಡರು.

1956: ಯುನೈಟೆಡ್ ಕಿಂಗ್ಡಮ್ ಮತ್ತು ಫ್ರಾನ್ಸ್ ಈಜಿಪ್ಟ್ ಮೇಲೆ ಸೈನಿಕ ದಾಳಿ ನಡೆಸಿದವು (ಸೂಯೆಝ್ ಕ್ರೈಸಿಸ್).

1999: ಈ ದಿನವನ್ನು ವಿಶ್ವಸಂಸ್ಥೆ ಱಅಂತಾರಾಷ್ಟ್ರೀಯ ಜನಸಂಖ್ಯಾ ದಿನಟ ಎಂದು ಘೋಷಿಸಿತು. ವಿಶ್ವ ಜನಸಂಖ್ಯೆ 6 ಶತಕೋಟಿಗೆ ತಲುಪಿದ ದಿನ.

2000: ಪ್ರಥಮ ಬಾರಿಗೆ ಮಾನವರು ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ವಾಸಿಸಲು ಆರಂಭಿಸಿದರು.

**ಜನನ**

1795: ಜಾನ್ ಕೀಟ್ಸ್, ಇಂಗ್ಲಿಷ್ ಕವಿ (ರೊಮ್ಯಾಂಟಿಕ್ ಕವಿತೆಗಳಿಗಾಗಿಯೇ ಖ್ಯಾತ)

1875: ವಲ್ಲಭಭಾಯಿ ಪಟೇಲ್, ಭಾರತದ ಱಲೋಹ ಪುರುಷಟಿ, ಸ್ವಾತಂತ್ರ್ಯ ಹೋರಾಟಗಾರ ಹಾಗೂ ಭಾರತದ ಪ್ರಥಮ ಉಪಪ್ರಧಾನಿ

1931: ಡಾ. ಲೌರಾ ಬರ್ಸಾನ್, ಇಟಲಿಯ ಖ್ಯಾತ ವಿಜ್ಞಾನಿ ಮತ್ತು ಪ್ರಾಧ್ಯಾಪಕಿ

1955 ರೀಜಾ ಶಾ ಪಹ್ಲವಿ, ಇರಾನ್‌ನ ಕೊನೆಯ ಶಾಹ್ (ರಾಜಾ)

1961 ಪೀಟರ್ ಜಾಕ್ಸನ್, ನಿರ್ದೇಶಕ

**ಮರಣ**

1926 ಹ್ಯಾರಿ ಹೂಡಿನಿ, ವಿಶ್ವ ಪ್ರಸಿದ್ಧ ಜಾದೂಗಾರ.

1984: ಇಂದಿರಾ ಗಾಂಧಿ, ಭಾರತದ ಪ್ರಧಾನಮಂತ್ರಿ (ಹತ್ಯೆ)

2003: ಮಹಮ್ಮದ್ ಅಝೀಜ್, ಬಾಲಿವುಡ್ ಗಾಯಕ

## ಭಾರತದ ದಿಟ್ಟ ಮಹಿಳೆ ಇಂದಿರಾ ಗಾಂಧಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

1984ರ ಅಕ್ಟೋಬರ್ 31 ಭಾರತದ ರಾಜಕೀಯ ಮತ್ತು ಸಾಮಾಜಿಕ ಇತಿಹಾಸದಲ್ಲಿ ಅಚ್ಚಳಿಯದ ಗುರುತು ಬಿಟ್ಟ ದಿನ. ಈ ದಿನ ಭಾರತದ ಪ್ರಥಮ ಮತ್ತು ಏಕೈಕ ಮಹಿಳಾ ಪ್ರಧಾನಮಂತ್ರಿ ಇಂದಿರಾ ಗಾಂಧಿ ಹತ್ಯೆಗೀಡಾದರು.

1984ರ ಜೂನ್ ತಿಂಗಳಲ್ಲಿ ಅಮೃತಸರದ ಸ್ವರ್ಣ ಮಂದಿರದಲ್ಲಿ ನಡೆದ ಱಆಪರೇಷನ್ ಬ್ಲೂ ಸ್ಟಾರ್ಟಿ ಕಾರ್ಯಾಚರಣೆಯು ಈ ಘಟನೆಯ ಮೂಲವಾಗಿದೆ. ಸಿಖ್ ಉಗ್ರರನ್ನು ಹೊರಹಾಕಲು ಭಾರತೀಯ ಸೇನೆ ಈ ಆಪರೇಷನ್ ನಡೆಸಿತು. ಈ ಕ್ರಮದಿಂದ ಸಿಖ್ ಸಮುದಾಯದಲ್ಲಿ ಆಕ್ರೋಶ ಉಂಟಾಯಿತು.

ಈ ಹಿನ್ನೆಲೆಯಲ್ಲೇ ಇಂದಿರಾ ಗಾಂಧಿಯವರದೇ ಅಂಗ ರಕ್ಷಕರಾದ ಸತವಂತ್ ಸಿಂಗ್ ಮತ್ತು ಬಿಯಂತ್ ಸಿಂಗ್ ಇಬ್ಬರೂ ಸಿಖ್ ಮೂಲದವರು ಅ. 31ರ ಬೆಳಿಗ್ಗೆ 9 ಗಂಟೆ ಸುಮಾರಿಗೆ ದೆಹಲಿಯ ಸಫ್ದರ್ಜಂಗ್ ರಸ್ತೆಯಲ್ಲಿ ಇಂದಿರಾ ಗಾಂಧಿ ಅವರಿಗೆ ಗುಂಡು ಹಾರಿಸಿದರು.

ಇಂದಿರಾ ಗಾಂಧಿ ಅವರು ಬೆಳಿಗ್ಗೆ ಪೀಟರ್ ಉಸ್ತಿನೋವ್ ಎಂಬ ಇಂಗ್ಲಿಷ್ ಚಲನಚಿತ್ರ ನಿರ್ದೇಶಕರಿಗೆ ಸಂದರ್ಶನ ನೀಡಲು ಹೊರಟಿದ್ದರು. ಅವರು ತೋಟದ ದಾರಿಯಲ್ಲಿ ನಡೆದುಕೊಂಡು ಬರುತ್ತಿದ್ದಾಗಲೇ ಇಬ್ಬರು ಅಂಗ ರಕ್ಷಕರು ಆಕಸ್ಮಿಕವಾಗಿ ಗುಂಡಿನ ದಾಳಿ ನಡೆಸಿದರು. ಗುಂಡುಗಳು ದೇಹದ ವಿವಿಧ ಭಾಗಗಳನ್ನು ಹೊಕ್ಕವು. ತಕ್ಷಣ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು, ಆದರೆ ವೈದ್ಯರು ಅವರನ್ನು ಉಳಿಸಲು ಸಾಧ್ಯವಾಗಲಿಲ್ಲ.



### ದೇಶದ ಮೇಲೆ ಪರಿಣಾಮ

ಇಂದಿರಾ ಗಾಂಧಿಯ ಹತ್ಯೆಯ ಬಳಿಕ ಭಾರತದಲ್ಲಿ ಉಗ್ರ ಸ್ಥಿತಿ ನಿರ್ಮಾಣವಾಯಿತು. ದೇಶದಾದ್ಯಂತ ಸಿಖ್ ವಿರೋಧಿ ಗಲಭೆಗಳು ಸ್ಫೋಟಗೊಂಡವು. ಸಾವಿರಾರು ಜನರು ಪ್ರಾಣ ಕಳೆದುಕೊಂಡರು, ಅನೇಕರು ನಿರಾಶ್ರಿತರಾದರು. ಆ ದಿನ ಕೇವಲ ಒಬ್ಬ ನಾಯಕಿಯ ಜೀವನವಲ್ಲ ಭಾರತದ ರಾಜಕೀಯ ನಿಶ್ಚಲತೆ ಮತ್ತು ಸಾಮಾಜಿಕ ಏಕತೆಗೂ ದೊಡ್ಡ ಹೊಡೆತ ಬಿದ್ದಿತು.

### ಇಂದಿರಾ ಗಾಂಧಿಯ ಪರಂಪರೆ

ಗರ್ ಗಾಂಧಿ ಬಚೀ ಹೈ, ತೋ ದೇಶ ಬಚಾ ಹೈ ಈ ಮಾತುಗಳು ಇಂದಿಗೂ ಸ್ಮರಣೀಯ. ಬಲಿಷ್ಠ ನೇತೃತ್ವ, ಅಚ್ಚುಕಟ್ಟಾದ ನಿರ್ಧಾರಗಳು ಮತ್ತು ಮಹಿಳಾ ಶಕ್ತಿ ಎಂಬ ತತ್ತ್ವವನ್ನು ಅವರು ಪ್ರತಿನಿಧಿಸಿದರು.

ಬ್ಯಾಂಕ್‌ಗಳ ರಾಷ್ಟ್ರೀಕರಣದಿಂದ ಹಿಡಿದು ಬಾಂಗ್ಲಾದೇಶ ಯುದ್ಧದ ಜಯದವರೆಗೂ ಅವರ ಪಾತ್ರ ಇತಿಹಾಸದಲ್ಲೇ ವಿಶಿಷ್ಟ. ಇಂದಿರಾ ಗಾಂಧಿ ಅವರು ಹತ್ಯೆಯಾದ ಅಕ್ಟೋಬರ್ 31 ರಂದು ದೇಶದಲ್ಲಿ ರಾಷ್ಟ್ರ ಏಕತಾ ದಿನ ಆಚರಿಸಲಾಗುತ್ತದೆ.

### ಇಂದಿರಾ ಗಾಂಧಿ ಜೀವಮಾನ ಸಾಧನೆ

ಭಾರತದ ಮೊದಲ ಮತ್ತು ಏಕೈಕ ಮಹಿಳಾ ಪ್ರಧಾನ ಮಂತ್ರಿ ಇಂದಿರಾ ಗಾಂಧಿ. ಅವರ ಸಾಧನೆಗಳಲ್ಲಿ 1971ರಲ್ಲಿ ಬಾಂಗ್ಲಾದೇಶ ವಿಮೋಚನೆ, ಹಸಿರು ಕ್ರಾಂತಿಯ ಮೂಲಕ ಕೃಷಿಯಲ್ಲಿ ಸುಧಾರಣೆ, ಬ್ಯಾಂಕುಗಳ ರಾಷ್ಟ್ರೀಕರಣ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಪ್ರತಿಷ್ಠೆಯನ್ನು ಹೆಚ್ಚಿಸುವಂತಹ ಅನೇಕ ನಿರ್ಧಾರಗಳು ಸೇರಿವೆ. ಅವರು ಅನೇಕ ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಸ್ವೀಕರಿಸಿದರು, ಇದರಲ್ಲಿ 1972 ರಲ್ಲಿ ದೊರೆತ ಭಾರತ ರತ್ನ ಕೂಡ ಸೇರಿದೆ.

### ಬಾಂಗ್ಲಾದೇಶ ವಿಮೋಚನೆ

1971ರ ಭಾರತ-ಪಾಕಿಸ್ತಾನ ಯುದ್ಧದಲ್ಲಿ ಭಾರತದ ವಿಜಯಕ್ಕೆ ಕಾರಣರಾದರು ಮತ್ತು ಬಾಂಗ್ಲಾದೇಶದ ರಚನೆಗೆ ಸಹಾಯ ಮಾಡಿದರು.

ಹಸಿರು ಕ್ರಾಂತಿ: ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಹಸಿರು ಕ್ರಾಂತಿಯನ್ನು ಯಶಸ್ವಿಯಾಗಿ ಜಾರಿಗೆ ತಂದರು.

ಬ್ಯಾಂಕುಗಳ ರಾಷ್ಟ್ರೀಕರಣ: 1969ರಲ್ಲಿ 14 ದೊಡ್ಡ ಭಾರತೀಯ ಖಾಸಗಿ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದರು, ಇದರಿಂದಾಗಿ ಬ್ಯಾಂಕಿಂಗ್ ವ್ಯವಸ್ಥೆಯು ಹೆಚ್ಚು ಜನರಿಗೆ ತಲುಪಿತು.

ಗರೀಬಿ ಹಟಾವೋ ಯೋಜನೆ: ಬಡತನ ನಿವಾರಣೆಗಾಗಿ ಈ ಯೋಜನೆಯನ್ನು ಪ್ರಾರಂಭಿಸಿದರು.

ಸಿಕ್ಕಿಂನ ಭಾರತಕ್ಕೆ ಸೇರ್ಪಡೆ: 1975ರಲ್ಲಿ ಬಹುತೇಕ ಸಿಕ್ಕಿಂ ಜನತೆಯ ಒಪ್ಪಿಗೆಯ ನಂತರ ಸಿಕ್ಕಿಂ ಅನ್ನು ಭಾರತಕ್ಕೆ ಸೇರಿಸಿಕೊಂಡರು. ಯೋಜನಾ ಆಯೋಗದ ಅಧ್ಯಕ್ಷತೆ: 1966-77ರ ಅವಧಿಯಲ್ಲಿ ಯೋಜನೆ ಆಯೋಗದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಅಂತಾರಾಷ್ಟ್ರೀಯ ಗುರುತಿಸುವಿಕೆ: 1972ರಲ್ಲಿ ಭಾರತ ರತ್ನ, 1972ರಲ್ಲಿ ಮೆಕ್ಸಿಕನ್ ಅಕಾಡೆಮಿ ಪ್ರಶಸ್ತಿ, 1973ರಲ್ಲಿ 2ನೇ ವಾರ್ಷಿಕ ಪದಕ ಮತ್ತು 1976ರಲ್ಲಿ ಸಾಹಿತ್ಯ ವಾಚಸ್ಪತಿ ಮುಂತಾದ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಪ್ರಮುಖ ಸಚಿವಾಲಯಗಳ ನಿರ್ವಹಣೆ: ಮಾಹಿತಿ ಮತ್ತು ಪ್ರಸಾರ ಸಚಿವಾಲಯ, ಗೃಹ ವ್ಯವಹಾರಗಳ ಸಚಿವಾಲಯ, ಹಣಕಾಸು ಸಚಿವಾಲಯ, ಅಣುಶಕ್ತಿ ಮತ್ತು ಬಾಹ್ಯಾಕಾಶ ಸಚಿವಾಲಯ, ಮತ್ತು ವಿದೇಶಾಂಗ ವ್ಯವಹಾರಗಳ ಸಚಿವಾಲಯದಂತಹ ವಿವಿಧ ಸಚಿವಾಲಯಗಳ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248